ಪ್ರಪಂಚದಲ್ಲಿ ಲಭಿಸುವುದೆಲ್ಲವೂ ಕ್ಷಣಿಕ, ಅದನ್ನು ದಾಟಿದ ಸತ್ಯವೊಂದಿದೆ. ಅದನ್ನು ಹೊಂದಿದರೆ ನಮಗೆ ಸಿಗುವ ಆನಂದ, ಅನುಭವ ಶಾಶ್ವತವಾದದ್ದು. ಇನ್ನು ಮುಂದೆ ನಮಗೆ ದುಃಖ ವಿಲ್ಲ, ಯಾವುದೇ ಭಯವಿಲ್ಲ, ನಾಶವಾಗುವ ಚಿಂತೆಯಿಲ್ಲ; ಮೃತ್ಯುವನ್ನು ದಾಟಿ ನಾವು ಅಮರರಾಗುತ್ತೇವೆ. ಈ ಸತ್ಯವೇ ಆತ್ಮ ಅಥವಾ ಬ್ರಹ್ಮ. ಅದನ್ನು ಹೊಂದಿದರೆ ಮಾತ್ರವೇ ನಾವು ಶಾಶ್ವತ ನೆಲೆಯನ್ನು ಕಂಡುಕೊಂಡಂತಾಗುತ್ತದೆ. ಎಲ್ಲ ಸಮಸ್ಯೆ ಗಳಿಗೂ ಪರಿಹಾರ ಇಲ್ಲಿದೆ. ಎಲ್ಲ ಪ್ರಶ್ನೆಗಳಿಗೂ ಉತ್ತರ ಇಲ್ಲಿದೆ. ಇದನ್ನು ಅರಿತರೆ, ಪಡೆದರೆ ಮಾನವನು ಸ್ವತಃ ತಾನೇ ಆ ಸತ್ಯವಾಗುತ್ತಾನೆ. ಈ ಬಗೆಯ ಆಧ್ಯಾತ್ಮಿಕ ಅನ್ವೇಷಣೆ ನಡೆದುದು ಭಾರತದಲ್ಲಿ. ಪ್ರಾಚೀನ ಋಷಿಮುನಿಗಳಿಂದ ರೂಪಿತವಾದ ಈ ಜೀವನ ತತ್ತ್ವಗಳು 'ವೇದಾಂತ ದರ್ಶನ'ದ ಮೂಲಕ ವಿಸ್ತಾರ ಗೊಂಡಿತು; ಹಲವು ಮಂದಿ ಅವತಾರಪುರುಷರ, ಮಹಾತ್ಮರ, ಸಾಧುಸಂತರ ಅನುಭವಗಳ ಮೂಲಕ ದೃಢೀಕೃತವಾಯಿತು. ಇದರ ಫಲವಾಗಿ ಆಧ್ಯಾತ್ಮಿಕ ಆದರ್ಶವೇ ಭಾರತೀಯ ಜನ ಜೀವನದ ಜೀವಾಳವಾಗಿ ಮಾರ್ಪಟ್ಟಿತು.

## ಮಾನವನ ವಿಕಾಸದಲ್ಲಿ ಹೊಸ ಹೆಜ್ಜೆ

ಪ್ರಾಣಿಜೀವನದಿಂದ ಮಾನವ ಜೀವನದತ್ತ, ಮಾನವ ಜೀವನ ದಿಂದ ದೈವೀಜೀವನದತ್ತ ಸಾಗುವುದೇ ಮಾನವನ ವಿಕಾಸದ ಹಂತದಲ್ಲಿ ಒಂದು ಹೊಸ ಹೆಜ್ಜೆಯಾಗಿ ಕಂಡುಬಂತು. ಪ್ರಪಂ ಚದ ಆಗುಹೋಗುಗಳ ನಡುವೆ, ನಿರಂತರ ಬದಲಾಗುವ ಪ್ರತಿ ಯೊಂದು ವಸ್ತುಗಳ ನಡುವೆ ಮಾನವನು ಶಾಶ್ವತವೊಂದನ್ನು ಕಲ್ಪಿಸಿಕೊಂಡದ್ದಾದರೂ ಹೇಗೆ? ಈ ಪ್ರಶ್ನೆಗೆ ಉತ್ತರ ಅತ್ಯಂತ ರೋಚಕವಾಗಿದೆ. ಮಾನವನ ಮೂಲಸ್ವರೂಪವೇ ಶಾಶ್ವತ ಸತ್ಯ ವಾದ, ಚಿರಂತನ ತತ್ತ್ವವಾದ, ಎಂದಿಗೂ ಬದಲಾಗದ ಆತ್ಮ. ಈ ಕಾರಣದಿಂದ ಮಾನವನ ಚಿಂತನೆಯ ಮೂಲದಲ್ಲಿಯೇ ನಿತ್ಯ ಸತ್ಯವಾದ, ಅಳಿವಿಲ್ಲದ ಒಂದು ವಸ್ತುವನ್ನು ಅರಸಬೇಕೆಂಬ ಹಂಬಲ ಅತ್ಯಂತ ಸಹಜವಲ್ಲವೆ?

ಬದಲಾವಣೆ, ಚಲನೆ, ಮಿತಿ ಇವನ್ನು ಗುರುತಿಸಬೇಕಾದರೆ, ಸ್ಥಾಯಿಯಾದ, ಅಚಲವಾದ ಹಾಗೂ ಅನಂತವಾದ ಒಂದು ವಸ್ತು ಇರಲೇಬೇಕು ಎಂಬ ಶ್ರೀ ಶಂಕರರ ವಾದದಲ್ಲಿ ಮಾನವನ ಬೌದ್ಧಿಕತೆ ಕಾಣಬಹುದಾದ ಪರಿಪೂರ್ಣತೆಯ ಮುಂಬೆಳಗನ್ನು ಗುರುತಿಸಬಹುದು. ವೇದಾಂತ ದರ್ಶನವು ನೀಡುವ ಆತ್ಮ ತತ್ತ್ವ ದಲ್ಲಿ ಮಾನವನ ಆದರ್ಶ, ಅನ್ವೇಷಣೆ, ಅನುಭವ ಹಾಗೂ ಆಧ್ಯಾತ್ಮಿಕತೆ ಇವು ಒಂದು ಖಚಿತವಾದ ನೆಲೆಯನ್ನು ಕಂಡವು.

ಇಂತಹ ದೈವೀ ಆದರ್ಶ, ಆಧ್ಯಾತ್ಮಿಕ ಭಾವನೆ ಅಥವಾ ಅತಿ ಸೂಕ್ಷ್ಮವೂ ಗಹನವೂ ಆದ ತತ್ತ್ವ – ಜನಸಾಮಾನ್ಯರ ಜೀವನ ದಲ್ಲಿ ಯಾವ ರೀತಿ ಉಪಯುಕ್ತವಾಗಲಿದೆ? ಅಮೂರ್ತ ತತ್ತ್ವ, ಸಿದ್ಧಾಂತಗಳು ನಮ್ಮ ಬದುಕಿನಲ್ಲಿ ಹೇಗೆ ಪ್ರಾಯೋಗಿಕವಾಗಿ ಬಳಕೆಯಾಗಬಲ್ಲವು? – ಈ ಪ್ರಶ್ನೆಗಳಿಗೆ ನಮ್ಮ ದೇಶದ ಜೀವನ ಕ್ರಮವೇ ಒಂದು ಉತ್ತರ. ಇದನ್ನು 'ಭಾರತೀಯ ಸಂಸ್ಕೃತಿ' ಎಂದಾದರೂ ಕರೆಯೋಣ. ಶತಶತಮಾನಗಳಿಂದಲೂ ನಮ್ಮ ದೇಶದಲ್ಲಿ ಸನಾತನ ಸತ್ಯಗಳನ್ನು ಪ್ರತಿಪಾದಿಸಿದ ಮಹಾತ್ಮರುಗಳ ಜೀವನ, ಸಂದೇಶಗಳೇ ಈ ತತ್ತ್ವಗಳನ್ನು ಜನರ ಜೀವನದಲ್ಲಿ ಅವಿಭಾಜ್ಯ ಅಂಗವನ್ನಾಗಿಸಿದವು ಎಂಬುದು ಅತ್ಯಂತ ಪ್ರಧಾನ ಸಂಗತಿಯಾಗಿದೆ.

## ಮಾನವ ಜೀವನದ ಪರಿಪೂರ್ಣತೆ

ಆಧುನಿಕ ಜಗತ್ತಿನಲ್ಲಿ ವಿಜ್ಞಾನ, ತಂತ್ರಜ್ಞಾನಗಳ ಪ್ರಭಾವ ಅಭೂತಪೂರ್ವವಾಗಿ ನಡೆದಿದೆ. ಇದರಿಂದಾಗಿ ಧರ್ಮ, ಆಧ್ಯಾ ತ್ಮಿಕ ಆದರ್ಶಗಳನ್ನು ಪ್ರಶ್ನಿಸುವ ಹಾಗೂ ಟೀಕಿಸುವ ಮನೋ ಭಾವ ಎಲ್ಲೆಡೆ ವ್ಯಾಪಕಗೊಂಡಿದೆ. ಆದರೆ ವೈಜ್ಞಾನಿಕ ಸತ್ಯಗಳಿಗೆ ವಿರೋಧವಲ್ಲದ ರೀತಿಯಲ್ಲಿ, ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ವೈಜ್ಞಾನಿಕ ರೀತಿಯಲ್ಲೇ ಅಧ್ಯಾತ್ಮವನ್ನು ವಿವರಿಸುವ ಪ್ರಯತ್ನ ಭಾರತದಲ್ಲಿ ನಡೆಯಿತು. ಈ ಕಾರ್ಯದಲ್ಲಿ ಎದ್ದು ಕಾಣುವ ಧ್ರುವತಾರೆಯೇ ಸ್ವಾಮಿ ವಿವೇಕಾನಂದರು. ಭಾರತದ ಆಧ್ಯಾತ್ಮಿಕ ಆದರ್ಶವನ್ನು ರಕ್ಷಿಸುವ ಹಾಗೂ ಎತ್ತಿ ಹಿಡಿಯುವ ಕೆಲಸ ಪ್ರಮುಖವಾಗಿ ಇವರಿಂದಲೇ ನಡೆಯಿತು.

ಮಾನವನ ಜೀವನದಲ್ಲಿ ಎಷ್ಟೇ ಆಧುನಿಕತೆ ಬರಲಿ, ಎಷ್ಟೇ ಬದಲಾವಣೆಗಳು ಉಂಟಾಗಲಿ; ಮೂಲಭೂತ ಪ್ರಶ್ನೆಗಳು ಇದ್ದೇ ಇರುತ್ತವೆ. ಅದಕ್ಕೆ ಅನುಗುಣವಾಗಿ ಅವುಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರವೃತ್ತಿಯೂ ನಿರಂತರ ನಡೆಯುತ್ತಿರುತ್ತವೆ. 'ಎಷ್ಟೋ ಪ್ರಾಚೀನ ಕಾಲದಲ್ಲೇ ಅವುಗಳಿಗೆ ಉತ್ತರ ಹುಡುಕಿದ್ದೇ ವಲ್ಲ ನಾವು? ಅದನ್ನರಿತು ಬಾಳಿದರೆ ನಮಗೆ ಇನ್ನು ಯಾವುದು ಬೇಕು?' ಇದು ಭಾರತವು ಜಗತ್ತಿಗೆ ನೀಡುವ ಸಂದೇಶ. ಎಷ್ಟು ಪ್ರಾಚೀನವೋ ಅಷ್ಟೇ ನೂತನ. ಎಲ್ಲ ಕಾಲಕ್ಕೆ, ಎಲ್ಲ ದೇಶಕ್ಕೆ ಸಲ್ಲುವ 'ಸನಾತನ' ಸತ್ಯ. ಇದನ್ನು ಕಂಡುಕೊಳ್ಳುವುದು, ಅದಕ್ಕೆ ಅನುಗುಣವಾಗಿ ಬದುಕನ್ನು ರೂಪಿಸಿಕೊಳ್ಳುವುದು, ಕೊನೆಗೆ ಆ ಸತ್ಯದ ಅನುಭವ ಪಡೆದುಕೊಳ್ಳುವುದು ಮಾನವನ ಗುರಿ. ಈ ಆದರ್ಶವನ್ನು ಸ್ಪಷ್ಟವಾಗಿ ಸಾರಿದವರು ಶ್ರೀರಾಮಕೃಷ್ಣರು : 'ಭಗ ವಂತನ ಸಾಕ್ಷಾತ್ಕಾರವೇ ಮಾನವ ಜೀವನದ ಗುರಿ ' ಎಂಬು ದಾಗಿ. ಈ ಆದರ್ಶವನ್ನು ಹೊಂದಿ, ಈ ಮಾರ್ಗದಲ್ಲಿ ನಡೆಯು ವುದೇ ಜೀವನದ ಪಯಣ; ಆ ಪಯಣವನ್ನು ಸಮರ್ಪಕವಾಗಿ ಮುನ್ನಡೆಸುವುದೇ ಜೀವನದ ಸಾರ್ಥಕತೆ. ಅಂತಿಮವಾಗಿ ಪರಮಸತ್ಯದ ಸಾಕ್ಷಾತ್ಕಾರ ಹೊಂದುವುದೇ ಮಾನವ ಜೀವನದ ಪರಿಪೂರ್ಣತೆ.

### ಜೂನ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೬ | ಶುಕ್ರವಾರ | ಏಕಾದಶಿ |
| ೨೧ | ಶನಿವಾರ | ಏಕಾದಶಿ |

# ವೈರಾಗ್ಯ

❖ **ಮೊ**ದಲು ಹೃದಯಮಂದಿರದಲ್ಲಿ ಭಗವಂತನನ್ನು ಪ್ರತಿಷ್ಠಾಪನೆ ಮಾಡಿಕೊಳ್ಳಿ. ಬಳಿಕ ಇಚ್ಛೆಯಾದರೆ ಲೆಕ್ಚರ್ ಕೊಡಿ. ವಿವೇಕ-ವೈರಾಗ್ಯ ಗಳಿಸಿಕೊಳ್ಳದೆ ಕೇವಲ 'ಬ್ರಹ್ಮ, ಬ್ರಹ್ಮ' ಅಂತ ಹೇಳುತ್ತಿದ್ದರೆ ಏನು ದೊರೆತೀತು? ಅದು ಬರೀ ಶಂಖಧ್ವನಿ ಮಾತ್ರ.



❖ **ಭ**ಗವಂತನ ಮಾಯೆಯಿಂದಲೇ ಈ ಜಗತ್ತು, ಈ ಸಂಸಾರ ಉದ್ಭವಿಸಿದೆ. ಮಹಾಮಾಯೆಯಲ್ಲಿ ವಿದ್ಯಾಮಾಯೆ, ಅವಿದ್ಯಾಮಾಯೆ ಎರಡೂ ಇವೆ. ವಿದ್ಯಾಮಾಯೆಯನ್ನು ಅವಲಂಬಿಸಿದರೆ, ಸಾಧುಸಂಗ, ಜ್ಞಾನ, ಭಕ್ತಿ, ಪ್ರೇಮ, ವೈರಾಗ್ಯ ಇವೆಲ್ಲಾ ಉಂಟಾಗುತ್ತದೆ. ಅವಿದ್ಯಾಮಾಯೆ ಎಂದರೆ ಪಂಚಭೂತಗಳು ಮತ್ತು ಪಂಚೇಂದ್ರಿಯಗಳ ವಸ್ತುಗಳು - ರೂಪ, ರಸ, ಗಂಧ, ಸ್ಪರ್ಶ, ಶಬ್ದ, ಇವು ಭಗವಂತನನ್ನು ಮರೆಸಿಬಿಡುತ್ತವೆ.

❖ **ವಿ**ವೇಕ ವೈರಾಗ್ಯಗಳನ್ನು ಗಳಿಸಿಕೊಂಡು ಬೇಕಾದರೆ ಸಂಸಾರದಲ್ಲಿ ಇರಬಹುದು. ಸಂಸಾರ ಸಮುದ್ರದಲ್ಲಿ ಕಾಮಕ್ರೋಧಾದಿ ಮೊಸಳೆಗಳು ವಾಸವಾಗಿವೆ. ಅರಸಿನ ಮೈಗೆ ಹಚ್ಚಿಕೊಂಡು ನೀರಿಗೆ ಇಳಿದರೆ ಮೊಸಳೆಗಳ ಕಾಟ ಇರುವುದಿಲ್ಲ. ವಿವೇಕ ವೈರಾಗ್ಯವೇ ಅರಸಿನ. ಸದಸದ್ವಿಚಾರಕ್ಕೆ ವಿವೇಕ ಅಂತ ಹೆಸರು. ಭಗವಂತನೇ ಸತ್, ನಿತ್ಯವಸ್ತು; ಉಳಿದುದೆಲ್ಲಾ ಅಸತ್, ಅನಿತ್ಯವಸ್ತು, ಎರಡು ದಿನದ ಬಾಳಿನವು - ಎಂಬುದೇ ಜ್ಞಾನ. ಭಗವಂತನಲ್ಲಿ ಅನುರಾಗ ಬೆಳೆಸಿಕೊಳ್ಳಬೇಕು. ಆತನ ಕಡೆ ಮನಸ್ಸು ಹರಿಯುವಂತೆ ಮಾಡಿಕೊಳ್ಳಬೇಕು, ಆತನನ್ನು ಪ್ರೀತಿಸಬೇಕು.

❖ **ವೈ**ರಾಗ್ಯದಲ್ಲಿ ಮೂರು-ನಾಲ್ಕು ವಿಧ. ಸಂಸಾರದ ಬೇಗೆಯಲ್ಲಿ ಬೆಂದು ಕಾಷಾಯ ವಸ್ತ್ರ ಧರಿಸುವುದು; ಇದು ಹೆಚ್ಚು ಕಾಲ ನಿಲ್ಲದು. ಬಹುಶಃ ಒಬ್ಬ ವ್ಯಕ್ತಿಗೆ ಯಾವ ಕೆಲಸವೂ ಸಿಗಲಿಲ್ಲ ಅಂತ ಇಟ್ಟುಕೊ. ಆತ ಕಾಷಾಯವಸ್ತ್ರ ಧರಿಸಿ ಕಾಶಿಗೆ ಹೋಗಿಬಿಡುತ್ತಾನೆ. ಮೂರು ತಿಂಗಳ ನಂತರ ಮನೆಗೆ ಬರೆಯುತ್ತಾನೆ. 'ನನಗೊಂದು ಕೆಲಸ ಸಿಕ್ಕಿದೆ. ಇನ್ನು ಸ್ವಲ್ಪ ದಿನಗಳಲ್ಲೇ ಊರಿಗೆ ಬರುತ್ತೇನೆ. ಇನ್ನು ನೀವು ನನ್ನ ಸಂಬಂಧವಾಗಿ ಚಿಂತಿಸಬೇಕಾಗಿಲ್ಲ.' ಬೇರೊಬ್ಬ ವ್ಯಕ್ತಿಗೆ ಎಲ್ಲವೂ ಇದೆ. ಯಾವುದರ ಅಭಾವವೂ ಇಲ್ಲ. ಆದರೂ ಆತನಿಗೆ ಅವೊಂದೂ ಬೇಕಾಗಿಲ್ಲ. ಭಗವಂತನ ಸಾಕ್ಷಾತ್ಕಾರಕ್ಕಾಗಿ ಏಕಾಕಿಯಾಗಿ ಅಳುತ್ತಾನೆ. ಇದೇ ಯಥಾರ್ಥ ವೈರಾಗ್ಯ.

❖ **ಅ**ನುರಾಗದ ಸಂಪತ್ತು ಯಾವ್ಯಾವುವು? ವಿವೇಕ, ವೈರಾಗ್ಯ, ಭೂತ ದಯೆ, ಸಾಧು ಸೇವೆ, ಸಾಧು ಸಂಗ, ಭಗವನ್ನಾಮ ಗುಣಕೀರ್ತನೆ, ಸತ್ಯವಚನ ಇವೇ ಮೊದಲಾದುವು. ಇವೆಲ್ಲಾ ಸಾಧಕನಲ್ಲಿ ಇರುವುದು ಕಂಡುಬಂದರೆ ನಿಸ್ಸಂದೇಹವಾಗಿ ಹೇಳಿಬಿಡಬಹುದು, ಆತನ ಭಗವತ್ಸಾಕ್ಷಾತ್ಕಾರಕ್ಕೆ ಇನ್ನು ಹೆಚ್ಚು ವಿಳಂಬವೇನಿಲ್ಲ ಎಂಬುದಾಗಿ.

❖ **ಭ**ಗವಂತನ ಕೃಪೆಯಿಂದ ಮಾನವನಲ್ಲಿ ತೀವ್ರ ವೈರಾಗ್ಯ ಉಂಟಾದದ್ದೇ ಆದರೆ, ಆಗ ಆತ ಕಾಮಕಾಂಚನಾಸಕ್ತಿಗಳಿಂದ ಮುಕ್ತನಾಗಬಲ್ಲ. ಯಾವುದಕ್ಕೆ ತೀವ್ರ ವೈರಾಗ್ಯ ಅಂತ ಹೆಸರು? ಮಂದ ವೈರಾಗ್ಯವಿರುವವನು ಹೇಳುತ್ತಾನೆ: 'ಎಲ್ಲಾ ಸಕಾಲಕ್ಕೆ ನಿಧಾನವಾಗಿ ಬರಲಿ; ಈಗ ಸದ್ಯ ನಾನು ಸುಮ್ಮನೆ ಭಗವಂತನ ನಾಮಜಪ ಮಾಡುತ್ತಿರುತ್ತೇನೆ.' ಆದರೆ ಯಾರಲ್ಲಿ ತೀವ್ರ ವೈರಾಗ್ಯ ಉಂಟಾಗಿದೆಯೋ, ಆತ ಹೇಗೆ ತಾಯಿ ತನ್ನ ಮಗುವಿಗಾಗಿ ವ್ಯಾಕುಲಳಾಗಿರುತ್ತಾಳೊ ಹಾಗೆಯೇ ಭಗವಂತನಿಗಾಗಿ ಬಹಳವಾಗಿ ವ್ಯಾಕುಲಪಡುತ್ತಿರುತ್ತಾನೆ. ತೀವ್ರ ವೈರಾಗ್ಯವುಳ್ಳವನಿಗೆ ಭಗವಂತನ ಹೊರತು ಇನ್ನು ಏನೂ ಬೇಕೆನಿಸುವುದಿಲ್ಲ. ಆತನಿಗೆ ಈ ಸಂಸಾರ ಒಂದು ದೊಡ್ಡ ಬಾವಿಯ ಹಾಗೆ ಕಾಣುತ್ತದೆ; ಅನ್ನಿಸುತ್ತದೆ, ಇದರಲ್ಲಿ ಮುಳುಗಿ ಹೋಗಿಬಿಡುತ್ತೇನಲ್ಲ ಎಂಬುದಾಗಿ. ಸ್ವಬಾಂಧವರು ಕಾಳಸರ್ಪಗಳ ಹಾಗೆ ಕಂಡುಬರುತ್ತಾರೆ; ಅವರಿಂದ ತಪ್ಪಿಸಿಕೊಂಡು ಓಡಿಹೋಗಲು ಇಚ್ಛೆಯಾಗುತ್ತದೆ. ಆತ ಕೊನೆಗೆ ಓಡಿಯೂ ಹೋಗುತ್ತಾನೆ. 'ಮನೆಯಲ್ಲಿ ಸುವ್ಯವಸ್ಥೆ ಮಾಡಿ ಬಿಟ್ಟು ಬಳಿಕ ಭಗವಚ್ಚಿಂತನೆ ಮಾಡೋಣ' ಎಂದು ಆತ ಎಂದಿಗೂ ಯೋಚಿಸುವುದೇ ಇಲ್ಲ. ಆಂತರ್ಯದಲ್ಲಿ ಆತನಿಗೆ ಒಳ್ಳೇ ಬಲ ಇದೆ.

❖ **ವ್ಯಾ**ಕುಲತೆಯೊಡನೆ ಅಳು. ವಿವೇಕ, ವೈರಾಗ್ಯ ಇವುಗಳಿಂದ ಎಲ್ಲವನ್ನೂ ತ್ಯಜಿಸಿಬಿಟ್ಟಿದ್ದೇ ಆದರೆ ಭಗವಂತನ ಸಾಕ್ಷಾತ್ಕಾರ ದೊರೆತುಬಿಡುತ್ತದೆ. ನಿಜವಾದ ವ್ಯಾಕುಲತೆ ಉಂಟಾಯಿತು ಎಂದರೆ, ಉನ್ಮತ್ತನ ಅವಸ್ಥೆ ಬಂದುಬಿಡುತ್ತದೆ - ಸಾಧಕ ಜ್ಞಾನಮಾರ್ಗಿಯಾದರೂ ಸರಿಯೆ, ಭಕ್ತಿಮಾರ್ಗಿಯಾದರೂ ಸರಿಯೆ.

'ಶ್ರೀರಾಮಕೃಷ್ಣ ವಚನವೇದ'ದಿಂದ

# ಶ್ರೀಮಾತೆಯವರು : ನಾನು ಕಂಡಂತೆ

ಬಂಗಾಳಿ ಮೂಲ : **ಸ್ವಾಮಿ ಭೂಮಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಭಾಗ ೧**

ನಗರದ ಹೊರವಲಯದ ಒಂದು ಸಣ್ಣ ಪಟ್ಟಣದಲ್ಲಿ ನನ್ನ ಪೂರ್ವಾಶ್ರಮದ ಮನೆಯಿತ್ತು. ೧೯೦೮ನೇ ಇಸವಿಯ ಮಾರ್ಚ್ ತಿಂಗಳಲ್ಲಿ ಶ್ರೀರಾಮಕೃಷ್ಣರ ಜಯಂತಿಯ ಉತ್ಸವದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಹ್ವಾನಿತರಾಗಿದ್ದ ಪೂಜ್ಯ ಬಾಬುರಾಮ ಮಹಾರಾಜ್ (ಸ್ವಾಮಿ ಪ್ರೇಮಾನಂದರು), ತುಳಸಿ ಮಹಾರಾಜ್ (ಸ್ವಾಮಿ ನಿರ್ಮಲಾನಂದರು) ಹಾಗೂ ನೀರದ್ ಮಹಾರಾಜರು (ಸ್ವಾಮಿ ಅಂಬಿಕಾನಂದರು) ಬೇಲೂರು ಮಠದಿಂದ ಆ ಸಣ್ಣ ಪಟ್ಟಣಕ್ಕೆ ಆಗಮಿಸಿದ್ದರು. ನನ್ನ ಪೂರ್ವಾಶ್ರಮದ ಮನೆಯಲ್ಲೇ ಈ ಸ್ವಾಮಿಗಳು ತಂಗುವುದೆಂದು ತೀರ್ಮಾನಿಸಲಾಗಿತ್ತು. ಉತ್ಸವದ ಆನಂದದಲ್ಲಿಯೇ ಏಳು ದಿನಗಳು ಕಳೆದವು. ಬೇಲೂರು ಮಠಕ್ಕೆ ಹಿಂದಿರುಗುವಾಗ ಬಾಬುರಾಮ ಮಹಾರಾಜರು ತಮ್ಮೊಂದಿಗೆ ನನ್ನನ್ನೂ ಕರೆದುಕೊಂಡು ಹೋದರು.

ನಾನು ಬಾಗ್‌ಬಜಾರಿನಲ್ಲಿರುವ ಬಲರಾಮ ಬಾಬುವಿನ ಮನೆಯಲ್ಲಿ ಮೊದಲ ಬಾರಿಗೆ ಶರತ್ ಮಹಾರಾಜರ ದರ್ಶನ ಪಡೆದೆ. ಆಗ ಅವರು ಗಡ್ಡ, ಮೀಸೆ ಬಿಟ್ಟಿದ್ದರು. ಅವರ ಅದೇ ಮಿತಭಾಷಿ, ಗಂಭೀರ ಮೂರ್ತಿಯನ್ನು ನೋಡಿ ನನಗೆ ಗೌರವ ಮೂಡಿತ್ತಾದ್ದರೂ, ಒಳ್ಳೆಯ ಭಾವನೆ ಉಂಟಾಗಿರಲಿಲ್ಲ. ಅಂತಹ ಗಂಭೀರ ಮೂರ್ತಿಯನ್ನು ನಾನು ಹಿಂದೆಂದೂ ನೋಡಿರಲಿಲ್ಲ. ಶರತ್ ಮಹಾರಾಜರನ್ನು ಮೊದಲ ಬಾರಿ ನಾನು ಭೇಟಿಯಾದುದು ಚೈತ್ರಮಾಸದಲ್ಲಿ. ಅದಾದ ಮೇಲೆ ಅವರನ್ನು ಕಂಡದ್ದು ವೈಶಾಖಮಾಸದ ಕೊನೆಯ ವಾರದಲ್ಲಿ ; ರಾತ್ರಿ ಸುಮಾರು ಹನ್ನೊಂದು ಗಂಟೆಗೆ. ಆಹಿರಿತೊಲಾದಿಂದ ನೌಕೆಯ ಮೂಲಕ ದಾಟಿ, ಸಾಲ್ಕಿಯಾ ಮಾರ್ಗವಾಗಿ ಶರತ್ ಮಹಾರಾಜರು ಬೇಲೂರು ಮಠಕ್ಕೆ ಬಂದಿದ್ದರು.

ನಾನು ಆಗಿನ್ನೂ ಎರಡು ತಿಂಗಳಾಗಿತ್ತು, ಬೇಲೂರು ಮಠಕ್ಕೆ ಬಂದು. ನಾನು ಮನೆಯಲ್ಲಿದ್ದಾಗ ನೋಡಿದ್ದ ಸಂನ್ಯಾಸಿಗಳೆಲ್ಲ ಬಹುಪಾಲು ಹಿಂದುಸ್ತಾನಿಗಳು. ಪ್ರಜ್ವಲಿಸುವ ಧುನಿಯ ಪಕ್ಕದಲ್ಲಿ, ಮರದ ಕೆಳಗೆ ಮಲಗಿ, ಗಾಂಜಾ ಸೇವಿಸುತ್ತ, ಕೌಪೀನ ಹಾಗೂ ಕಂಬಳಿಯನ್ನಷ್ಟೇ ಹೊಂದಿದ್ದ ಅವರು ರೋಗಿಗಳಿಗೆ ಔಷಧಿ ನೀಡುತ್ತ, ಬಾಡಿಗೆ ಹಣಕ್ಕಾಗಿ ಗೃಹಸ್ಥರ ಮನೆಗಳಿಗೆ ಶುಭಾಗಮನ ಮಾಡುತ್ತ ಇರುತ್ತಾರೆ – ಇದೇ ಸಾಧುಗಳ ಲಕ್ಷಣ ಎಂದು ನಾನು ಭಾವಿಸಿದ್ದೆ. ಇದಲ್ಲದೆ, ಸ್ಥಳೀಯ ಜನರ ನಡುವೆ ಧಾರ್ಮಿಕ ವ್ಯಕ್ತಿಗಳೆನಿಸಿಕೊಂಡವರು ಮಾತಿನ ನಡುವೆ ಅಸಂಬದ್ಧ ಮಾತುಗಳನ್ನು ಆಡುತ್ತಿದ್ದುದನ್ನೂ ಕೇಳಿದ್ದೆ. ಕೆಲವರು ಮೌನವಾಗಿರುತ್ತಿದ್ದರು. ಧಾರ್ಮಿಕರಲ್ಲಿ ಬಹುಪಾಲು ಮಂದಿ ನಡುನಡುವೆ ಜೋರಾಗಿ ನಗುತ್ತ, ಕೆಲವೊಮ್ಮೆ ಅಳುತ್ತ, ಕೆಲವೊಮ್ಮೆ ನರ್ತಿಸುತ್ತ, ಇನ್ನು ಕೆಲವೊಮ್ಮೆ ಕೆಟ್ಟ ಭಾಷೆಯಲ್ಲಿ ಬಯ್ಯುತ್ತಿದ್ದರು. ಈ ಧಾರ್ಮಿಕರೆಲ್ಲ ಮಾತಿನ ನಡುವೆ 'ಕಳೆದು ಹೋಗು'ತ್ತಿದ್ದರು; ಈ ಜಗತ್ತಿನಲ್ಲಿ ಅವರ ಮನಸ್ಸು ಹೆಚ್ಚು ಹೊತ್ತು ನಿಲ್ಲಲಾರದು ಎಂದು ಈ ಮೂಲಕ ತಿಳಿಸುತ್ತಿದ್ದರು. ಹೀಗೆ 'ಕಳೆದು ಹೋಗು'ವುದೇ ಧಾರ್ಮಿಕರ ಒಂದು ಮುಖ್ಯ ಲಕ್ಷಣ ಎಂದು ತಿಳಿದುಕೊಂಡಿದ್ದೆ.



ಕಲೆ: ಫ್ರಾಂಕ್ ಡ್ವರಾಕ್

ಬೇಲೂರು ಮಠಕ್ಕೆ ಬಂದ ನಂತರ ನನ್ನ ಹಿಂದಿನ ತಿಳಿವಳಿಕೆ ತಪ್ಪು ಎಂದು ಅರ್ಥವಾಯಿತು. ಸಂಸಾರದಲ್ಲಿ ಇದ್ದಾಗ ನಾನೊಬ್ಬ ವೀಕ್ಷಕನಾಗಿದ್ದೆ. ಈಗ ನಾನೊಬ್ಬ ಶಿಷ್ಯ, ಕಲಿಯಬೇಕಾಯಿತು– 'ಭಾವ' ಇರುವುದು ತುಂಬಾ ಒಳ್ಳೆಯದೆ, ಆದರೆ ಅದರೊಂದಿಗೆ 'ಒಲವು' ಇರುವುದು ಒಳ್ಳೆಯದಲ್ಲ ಎಂದು; ಅದೇ ರೀತಿ 'ಶುಚಿತ್ವ' ಇರುವುದು ಒಳ್ಳೆಯದೆ, ಆದರೆ ಅದರೊಂದಿಗೆ 'ಆವೇಗ' ಒಳ್ಳೆಯದಲ್ಲ ಎಂದು. 'ಕಳೆದು ಹೋಗು'ವುದು ಧಾರ್ಮಿಕತೆಯ ಲಕ್ಷಣವಲ್ಲ, ಅದು ಕಟ್ಟುನಿಟ್ಟಾದ ಬ್ರಹ್ಮಚರ್ಯವಿಲ್ಲದಿದ್ದರೆ ಉಂಟಾಗುವ ಫಲವೆಂದು ನಾನು ಅರಿತೆ. ಸಾಧುಗಳ ಮಾಂಸ–ಪೇಶಿಗಳು ಲೋಹದ್ದಾಗುವುವು, ಸ್ನಾಯುಗಳು ಉಕ್ಕಿನದಾಗುವುವು, ಹಾಗೂ ಯಾವುದರಿಂದಲೂ ತಡೆಯಲಾಗದಂಥ ಇಚ್ಛಾಶಕ್ತಿ ಉಂಟಾಗುವುವು ಎಂದು ನಾನು ಕೇಳಿದೆ.